## ಈ ಲೇಖನದ ವಿಷಯಾನುಕ್ರಮಣಿಕೆ


ಹೇಮಲಂಬದಲ್ಲಿ ಉಪಾಕರ್ಮದ ಚರ್ಚೆ 2

ಋಗ್ವೇದ ಉಪಾಕರ್ಮಕ್ಕೆ ಮುಖ್ಯಕಾಲಗಳು 4

ಕೃಷ್ಣಯಜುರ್ವೇದ ಉಪಾಕರ್ಮಕ್ಕೆ ಮುಖ್ಯಕಾಲಗಳು 5

ಶುಕ್ಲ ಯಜುರ್ವೇದ ಉಪಾಕರ್ಮಕ್ಕೆ ಮುಖ್ಯಕಾಲಗಳು 5

ಈ ಬಾರಿ ಇರುವ ಸಮಸ್ಯೆ 6

ದೋಷವಿರುವ ದಿವಸ ನಿತ್ಯೋಪಾಕರ್ಮವನ್ನೂ ಮಾಡಬಾರದು 8

ನಿತ್ಯಕರ್ಮಕ್ಕೂ ಬೇರೆ ಕಾಲಗಳಿದ್ದೇ ಇರುತ್ತವೆ 10

ಮಾಧ್ವರಿಗಾಗಿ ಒಂದು ಯುಕ್ತಿ 12

ಮಾಧ್ವೇತರರಿಗಾಗಿ ಒಂದು ಯುಕ್ತಿ 14

ಎಲ್ಲದರ ಸಂಗ್ರಹ 16

ನಿರ್ಣಯ 19

- ಋಗ್ವೇದಿ ನಿತ್ಯ ನೂತನ ಉಪಾಕರ್ಮ 19
- ಕೃಷ್ಣಯಜುರ್ವೇದಿ ನಿತ್ಯ ನೂತನ ಉಪಾಕರ್ಮ 20
- ಶುಕ್ಲಯಜುರ್ವೇದಿ ನಿತ್ಯ ನೂತನ ಉಪಾಕರ್ಮ 22

# ವಿಶ್ವನಂದಿನಿ ಲೇಖನಮಾಲೆ — 218

## ಹೇಮಲಂಬದಲ್ಲಿ ಉಪಾಕರ್ಮದ ಚರ್ಚೆ

ದುರ್ಮುಖ ಸಂವತ್ಸರದಲ್ಲಿ ಉಪಾಕರ್ಮದ ಕುರಿತಾಗಿ ವಿವಾದ ಉಂಟಾದದ್ದು ಎಲ್ಲರಿಗೂ ತಿಳಿದಿದೆ. ಹೇಮಲಂಬ ಸಂವತ್ಸರದಲ್ಲಿಯೂ ಉಪಾಕರ್ಮದ ವಿಷಯದಲ್ಲಿ ಗೊಂದಲ ಕಂಡು ಬಂದಿರುವದರಿಂದ ಇದರ ಕುರಿತ ಒಂದು ವಸ್ತುನಿಷ್ಠ ಚರ್ಚೆಯನ್ನು ಹಾಗೂ ದೋಷರಹಿತ ನಿರ್ಣಯವನ್ನೂ ಈಗಲೇ[1] ಪ್ರಕಟಿಸುತ್ತಿದ್ದೇನೆ.

ಬ್ರಾಹ್ಮಣವರ್ಗದ ಎಲ್ಲ ಪಂಚಾಂಗಕರ್ತರೂ ಇದನ್ನು ಅವಲೋಕಿಸಿ, ಧರ್ಮಶಾಸ್ತ್ರದ ವಚನಗಳನ್ನೂ ಅವಲೋಕಿಸಿ ಒಂದೇ ರೀತಿಯಾಗಿ ಪ್ರಕಟಿಸಬೇಕೆಂದೂ ವಿನಮ್ರವಾಗಿ ವಿನಂತಿಸುತ್ತೇನೆ.

[1] ಪುಷ್ಯಕೃಷ್ಣ ಚತುರ್ದಶೀ, 26-1-2017

ಇಲ್ಲಿ ಹೇಳಿರುವ ನಿರ್ಣಯಕ್ಕೆ ಭಿನ್ನವಾಗಿ ಬೇರೆಯ ರೀತಿಯಲ್ಲಿ ಆಚರಣೆ ಮಾಡುವದಾದರೆ ದಯವಿಟ್ಟು ತಮ್ಮ ನಿರ್ಣಯಕ್ಕೆ ಕಾರಣಗಳನ್ನು ನೀಡಬೇಕೆಂದೂ ವಿನಂತಿಸುತ್ತೇನೆ.

ಉಪಾಕರ್ಮ ಎನ್ನುವ ಕ್ರಿಯೆ ಮಠದಿಂದ ಮಠಕ್ಕೆ, ಮತದಿಂದ ಮತಕ್ಕೆ ಬದಲಾಗುವದಿಲ್ಲ. ವೇದದಿಂದ ವೇದಕ್ಕೆ ಬದಲಾಗುತ್ತದೆ.  ಆದ್ದರಿಂದ ಒಂದೇ ವೇದಕ್ಕೆ ಸೇರಿದ ಎಲ್ಲ ಮತದ  ದ್ವಿಜರಿಗೂ ಒಂದೇ ದಿವಸ ಉಪಾಕರ್ಮ ಬರುತ್ತದೆ.

ಸಮಗ್ರ ಬ್ರಾಹ್ಮಣಸಮುದಾಯದಲ್ಲಿ ಆಯಾಯ ವೇದದವರು ಒಂದೇ ದಿವಸ ಉಪಾಕರ್ಮದ ಆಚರಣೆಯನ್ನು ಮಾಡಬೇಕು ಎನ್ನುವ ಉದ್ದೇಶದಿಂದ ವಿಸ್ತೃತವಾದ ಚರ್ಚೆಯನ್ನು ಪಂಚಾಂಗಗಳು ಮುದ್ರಣವಾಗುವದಕ್ಕಿಂತ ಮುಂಚೆಯೇ ಸಮಾಜದ ಮುಂದೆ ಪ್ರಕಟಿಸುತ್ತಿದ್ದೇನೆ.

ಉಪಾಕರ್ಮದ ಕುರಿತ ನನ್ನ ಹಿಂದಿನ ಲೇಖನದಲ್ಲಿ [VNA192] ವಿಸ್ತಾರವಾಗಿ ಉಪಾಕರ್ಮದ

ಕಾಲಗಳನ್ನು ತಿಳಿಸಿದ್ದೇನೆ. ಅದನ್ನು ಓದಿದ ನಂತರ ಇದನ್ನು ಓದಬೇಕಾಗಿ ವಿನಂತಿ.

## ಋಗ್ವೇದ ಉಪಾಕರ್ಮಕ್ಕೆ ಮುಖ್ಯಕಾಲಗಳು[2]

ಪ್ರಧಾನ ಪಕ್ಷ. ಶ್ರಾವಣ ಮಾಸದಲ್ಲಿ ಶ್ರವಣಾ ನಕ್ಷತ್ರ ಇರುವ ದಿವಸ.

ಎರಡನೆಯ ಪಕ್ಷ. ಶ್ರಾವಣ ಮಾಸದಲ್ಲಿ ಹಸ್ತಾನಕ್ಷತ್ರ ಇರುವ ಪಂಚಮಿಯಂದು.

ಮೂರನೆಯ ಪಕ್ಷ. ಶ್ರಾವಣ ಮಾಸದಲ್ಲಿ ಹಸ್ತಾನಕ್ಷತ್ರ ಇರುವ ದಿವಸ.

ನಾಲ್ಕನೆಯ ಪಕ್ಷ. ಶ್ರಾವಣ ಮಾಸದಲ್ಲಿ ಪಂಚಮಿಯ ದಿವಸ.

ಐದನೆಯ ಪಕ್ಷ. ಭಾದ್ರಪದದಲ್ಲಿ ಇದೇ ಮೇಲ್ಕಂಡ ರೀತಿಯ ತಾರತಮ್ಯದಲ್ಲಿ ದಿವಸಗಳು. ಅಂದರೆ, ಶ್ರವಣಾ, ಹಸ್ತಾಯುಕ್ತಾ ಪಂಚಮೀ, ಪಂಚಮೀ.

---

[2] ಪ್ರಮಾಣಗಳನ್ನು VNA192ನೇ ಲೇಖನದಲ್ಲಿ ನೀಡಿದ್ದೇನೆ.

## ಕೃಷ್ಣಯಜುರ್ವೇದ ಉಪಾಕರ್ಮಕ್ಕೆ ಮುಖ್ಯಕಾಲಗಳು

ಪ್ರಧಾನ ಪಕ್ಷ. ಶ್ರಾವಣ ಮಾಸ ಹುಣ್ಣಿಮೆ.

ಎರಡನೆಯ ಪಕ್ಷ. ಭಾದ್ರಪದ ಹುಣ್ಣಿಮೆ

ಮೂರನೆಯ ಪಕ್ಷ. ಆಷಾಢದ ಹುಣ್ಣಿಮೆ

## ಶುಕ್ಲ ಯಜುರ್ವೇದ ಉಪಾಕರ್ಮಕ್ಕೆ ಮುಖ್ಯಕಾಲಗಳು

ಪ್ರಧಾನ ಪಕ್ಷ. ಶ್ರಾವಣ ಮಾಸ ಹುಣ್ಣಿಮೆ.

ಎರಡನೆಯ ಪಕ್ಷ. ಪಂಚಮೀತಿಥಿ. (ಹಸ್ತಾ ನಕ್ಷತ್ರದ ಆವಶ್ಯಕತೆಯಿಲ್ಲ)

ಮೂರನೆಯ ಪಕ್ಷ: ಭಾದ್ರಪದ ಹುಣ್ಣಿಮೆ

ನಾಲ್ಕನೆಯ ಪಕ್ಷ. ಆಷಾಢದ ಹುಣ್ಣಿಮೆ

## ಈ ಬಾರಿ ಇರುವ ಸಮಸ್ಯೆ

ಈ ವರ್ಷ ಅಂದರೆ ಹೇಮಲಂಬ (2017) ಸಂವತ್ಸರದಲ್ಲಿ ಶ್ರಾವಣ ಪೂರ್ಣಿಮೆಯ ದಿವಸವೇ ಶ್ರವಣಾ ನಕ್ಷತ್ರವಿದೆ.

ಶ್ರವಣಾನಕ್ಷತ್ರ ಋಗ್ವೇದಿಗಳಿಗೆ ಪ್ರಧಾನಕಾಲ ಮತ್ತು ಯಜುರ್ವೇದಿಗಳಿಗೆ ಹುಣ್ಣಿಮೆ ಪ್ರಧಾನಕಾಲವಾದ್ದರಿಂದ ಇಬ್ಬರಿಗೂ ಒಂದೇ ದಿವಸ ಉಪಾಕರ್ಮ ಬಂದಿದೆ.

ಆದರೆ ಹುಣ್ಣಿಮೆಯ ರಾತ್ರಿ ಚಂದ್ರಗ್ರಹಣವಿರುವದರಿಂದ ಉಪಾಕರ್ಮ ಮಾಡಬೇಕೇ ಮಾಡಬಾರದೇ ಎನ್ನುವ ಪ್ರಶ್ನೆ ಮೂಡುತ್ತದೆ.  ಸ್ಕಂದಪುರಾಣದಲ್ಲಿ

> **ಗ್ರಹಸಂಕ್ರಾಂತಿದುಷ್ಟೇತು**
> **ಕಾಲೇ ಕಾಲಾಂತರೇ ಭವೇತ್ ।**
> **ಪಂಚಮ್ಯಾಂ ಹಸ್ತಯುಕ್ತಾಯಾಂ**
> **ಪೂರ್ಣಾಯಾಂ ವಾ ನಭಸ್ಯಕೇ ।।**

ಎಂಬ ವಚನವಿರುವದರಿಂದ ಗ್ರಹಣ ಸಂಕ್ರಾಂತಿಗಳು ಇರುವ ದಿವಸ ಉಪಾಕರ್ಮವನ್ನು ಮಾಡಬಾರದು.

ಆದರೆ ಕೆಲವರು, ಈ ವಚನ ನಿತ್ಯೋಪಾಕರ್ಮಕ್ಕೆ ಸಂಬಂಧಿಸಿದ್ದಲ್ಲ, ನೂತನೋಪಾಕರ್ಮಕ್ಕೆ ಮಾತ್ರ ಸಂಬಂಧಿಸಿದ್ದು ಎನ್ನುತ್ತಾರೆ.

ವಿವರಿಸುತ್ತೇನೆ.

ಉಪನಯನವಾದ ನಂತರ ಮೊದಲ ಬಾರಿ ಮಾಡಿಕೊಳ್ಳುವ ಉಪಾಕರ್ಮ ನೂತನೋಪಾಕರ್ಮ, ಮತ್ತು ಆ ನಂತರದ ವರ್ಷಗಳಲ್ಲಿ ಮಾಡಿಕೊಳ್ಳುವ ಉಪಾಕರ್ಮ ನಿತ್ಯೋಪಾಕರ್ಮ ಎನಿಸಿಕೊಳ್ಳುತ್ತದೆ.

ನೂತನೋಪಾಕರ್ಮಕ್ಕೆ ಮಾತ್ರ ಈ ನಿಷೇಧಗಳು. ಉಪಾಕರ್ಮ ಇದು ನಿತ್ಯಕರ್ಮವಾದ್ದರಿಂದ[3] ಅದನ್ನು ಗ್ರಹಣ ಸಂಕ್ರಾಂತಿಗಳ ದೋಷವಿರುವ

---

[3] ನಿತ್ಯಕರ್ಮ ಎಂದರೆ ಯಾವ ಸಂದರ್ಭದಲ್ಲಿಯೂ ಬಿಡದೇ ಆಚರಿಸಬೇಕಾದ ಕರ್ಮ. ಉದಾಹರಣೆ, ಸಂಧ್ಯಾವಂದನೆ.

ದಿವಸವೂ ಮಾಡಲೇಬೇಕು ಎನ್ನುವದು ಕೆಲವರ ವಾದ.

ಇದು ಸರಿಯೋ ತಪ್ಪೋ ಎನ್ನುವದನ್ನು ಶಾಸ್ತ್ರವಚನಗಳ ಆಧಾರದೊಂದಿಗೆ ವಿಮರ್ಶಿಸೋಣ.

## ದೋಷವಿರುವ ದಿವಸ ನಿತ್ಯೋಪಾಕರ್ಮವನ್ನೂ ಮಾಡಬಾರದು

ಮೊದಲಿಗೆ ಉಪಾಕರ್ಮ ನಿತ್ಯಕರ್ಮ ಎನ್ನುವದರಲ್ಲಿ ಸಂಶಯವಿಲ್ಲ. ಆದರೆ ಉಪಾಕರ್ಮವನ್ನು ವಿಧಾನ ಮಾಡಬೇಕಾದರೆ ಒಂದೇ ಕಾಲವನ್ನು ವಿಧಿಸುವದಿಲ್ಲ, ಅನೇಕ ಕಾಲಗಳನ್ನೇ ಉಲ್ಲೇಖಿಸುತ್ತದೆ. ಆಶ್ವಲಾಯನರ ಗೃಹ್ಯಪರಿಶಿಷ್ಟವನ್ನು ನೋಡಿ —

> **“ಅಥಾತೋಽಧ್ಯಾಯೋಪಾಕರಣಮ್,**
> **ಓಷಧೀನಾಂ ಪ್ರಾದುರ್ಭಾವೇ ಶ್ರವಣೇನ,**
> **ಶ್ರಾವಣಸ್ಯ ಪಂಚಮ್ಯಾಮ್, ಹಸ್ತೇನ ವಾ”**

ಮೊದಲಿಗೆ ಉಪಾಕರ್ಮವನ್ನು ಸೂತ್ರದಲ್ಲಿ ವಿಧಾನ ಮಾಡಿ, ಅ ನಂತರ ಅಪವಾದದ ಪಕ್ಷದಲ್ಲಿ ಕಾಲಗಳನ್ನು ಹೇಳಿಲ್ಲ. ಹೊರತು, ಉಪಾಕರ್ಮದ ವಿಧಾನದಲ್ಲಿಯೇ ಕಾಲಗಳನ್ನು ಹೇಳಿದ್ದಾರೆ. ಇದರಿಂದ ತಿಳಿಯುವ ವಿಷಯ, ಅದು ನಿತ್ಯೋಪಾಕರ್ಮವಾಗಿರಲಿ, ನೂತನೋಪಾಕರ್ಮವಾಗಿರಲಿ ಈ ಕಾಲಗಳಲ್ಲಿ ಉಪಾಕರ್ಮವನ್ನು ಮಾಡಬೇಕು ಎಂದು.

ಉಪಾಕರ್ಮವನ್ನು ವರ್ಷಕ್ಕೆ ಒಂದೇ ಬಾರಿ ಮಾಡಬೇಕು. ಅಂತಹ ಉಪಾಕರ್ಮಕ್ಕೆ ಒಂದೇ ಕಾಲ ಸಾಕು. ಕೃಷ್ಣಾಷ್ಟಮಿಗೆ ಶ್ರಾವಣ ಕೃಷ್ಣ ಅಷ್ಟಮಿಯಂತೆ. ಆದರೆ, ಧರ್ಮಶಾಸ್ತ್ರಗಳು ಐದು ಕಾಲಗಳನ್ನು ವಿಧಾನ ಮಾಡುತ್ತವೆ. ಇದರ ಅರ್ಥವೇನು? ಒಂದು ಕಾಲದಲ್ಲಿ ದೋಷವಿದ್ದಾಗ ದೋಷವಿಲ್ಲದ ಮತ್ತೊಂದು ಕಾಲದಲ್ಲಿ ಮಾಡಿ ಎಂದು ತಾನೇ?

ಅಂದರೆ, ನಿತ್ಯೋಪಾಕರ್ಮವಾಗಿರಲಿ, ನೂತನೋಪಾಕರ್ಮವಾಗಿರಲಿ ಅದಕ್ಕೆ ಅನೇಕ ಕಾಲಗಳು ವಿಹಿತ. ಆದ್ದರಿಂದ

ನಿತ್ಯೋಪಾಕರ್ಮವನ್ನು ಪ್ರಧಾನಕಾಲದಲ್ಲಿ ದೋಷವಿದ್ದರೂ ಮಾಡಬೇಕು ಎನ್ನುವ ಪಕ್ಷ ಸಿದ್ಧವಾಗುವದಿಲ್ಲ.

ನಿತ್ಯೋಪಾಕರ್ಮಕ್ಕೆ ಒಂದೇ ಕಾಲ ಸಾಕಾಗಿದ್ದರೆ ಉಳಿದ ಕಾಲಗಳನ್ನು ವಿಧಾನ ಮಾಡುವ ಪ್ರಸಕ್ತಿಯೇ ಇರುತ್ತಿರಲಿಲ್ಲ. ಬೇರೆ ಬೇರೆ ಕಾಲಗಳನ್ನು ವಿಧಾನ ಮಾಡಿರುವದರಿಂದಲೇ, ದೋಷವಿರುವ ಕಾಲವನ್ನು ಬಿಟ್ಟು ದೋಷವಿಲ್ಲದ ಕಾಲದಲ್ಲಿ ಉಪಾಕರ್ಮ ಆಚರಿಸಬೇಕು ಎಂದು ಸಿದ್ಧವಾಗುತ್ತದೆ.

## ನಿತ್ಯಕರ್ಮಕ್ಕೂ ಬೇರೆ ಕಾಲಗಳಿದ್ದೇ ಇರುತ್ತವೆ

ಮತ್ತೂ, ಸಂಧ್ಯಾವಂದನೆ ನಿತ್ಯಕರ್ಮ. ಅದರ ಪ್ರಧಾನ ಕಾಲ ಬೆಳಿಗ್ಗೆ ಸೂರ್ಯೋದಯಕ್ಕಿಂತ ಮುಂಚೆ, ಸಂಜೆ ಸೂರ್ಯಾಸ್ತಕ್ಕಿಂತ ಮುಂಚೆ. ಅನಿವಾರ್ಯವಾಗಿ ಆ ಕಾಲದಲ್ಲಿ ಸಂಧ್ಯಾವಂದನೆಯನ್ನು ಮಾಡಲಾಗದಿದ್ದಲ್ಲಿ ಪ್ರಾಯಶ್ಚಿತ್ತಾರ್ಘ್ಯದ ಜೊತೆಯಲ್ಲಿ ಬೆಳಿಗ್ಗೆ ಸೂರ್ಯೋದಯದ ನಂತರ, ಸಂಜೆ

ಸೂರ್ಯಾಸ್ತದ ನಂತರ ಮಾಡಿ ಎಂದು ಶಾಸ್ತ್ರ ವಿಧಿಸುತ್ತದೆ ತಾನೆ?

ಮತ್ತು ಇದು ಕೇವಲ ಪ್ರಮಾದದಿಂದ ಕಾಲವಿಲಂಬವಾದಾಗ ಅಲ್ಲ. ನಮಗೆ ಸೂತಕ ಬಂದಿದೆ ಎಂದಿಟ್ಟುಕೊಳ್ಳೋಣ. ಸೂತಕದ ನಿವೃತ್ತಿ ಸೂರ್ಯೋದಯದ ನಂತರವೇ. ಸೂರ್ಯೋದಯದ ನಂತರ ಸ್ನಾನ ಮಾಡಿ ಜನಿವಾರವನ್ನು ಬದಲಾಯಿಸಿಯೇ ಸಂಧ್ಯಾವಂದನೆ ಮಾಡಬೇಕು. ಆಗ ಅನಿವಾರ್ಯವಾಗಿ ಕಾಲಾತಿಕ್ರಮವಾಗಿದೆ. ಆದರೂ ಸಹ ಪ್ರಾಯಶ್ಚಿತ್ತಾರ್ಘ್ಯದ ಜೊತೆಯಲ್ಲಿ ಕಾರ್ಯಗಳನ್ನು ಮಾಡುತ್ತೇವೆ. ಮೀಮಾಂಸಾಗ್ರಂಥಗಳಲ್ಲಿ ಈ ರೀತಿ ಪ್ರಾಯಶ್ಚಿತ್ತಸಹಿತವಾಗಿ ನಿತ್ಯಕರ್ಮಗಳನ್ನು ಆಚರಿಸುವ ಹತ್ತಾರು ಉದಾಹರಣೆಗಳನ್ನು ಕಾಣುತ್ತೇವೆ.

ಇಷ್ಟೇ ವ್ಯತ್ಯಾಸ. ಸಂಧ್ಯಾವಂದನೆಗೆ  ಸಂಧ್ಯಾ ಎಂಬ ಒಂದೇ ಕಾಲ ವಿಹಿತ. ಆದರೆ, ಉಪಾಕರ್ಮಕ್ಕೆ ಧರ್ಮಶಾಸ್ತ್ರಗಳಲ್ಲಿಯೇ ಐದು ಕಾಲ ವಿಹಿತ. ಆದ್ದರಿಂದ ಶ್ರವಣಾ ಅಥವಾ ಹುಣ್ಣಿಮೆಯಂದು

ಮಾಡಲಿಕ್ಕೆ ಸಾಧ್ಯವಾಗದಿದ್ದಲ್ಲಿ ಪಂಚಮೀ, ಹಸ್ತಾ ಮುಂತಾದವುಗಳಲ್ಲಿ ಮಾಡಬಹುದು. ಆದ್ದರಿಂದ ಪ್ರಾಯಶ್ಚಿತ್ತದ ಆವಶ್ಯಕತೆಯಿಲ್ಲ.

ನಿತ್ಯಕರ್ಮವಾದ ಸಂಧ್ಯಾವಂದನೆಯನ್ನೂ ಆ ಕಾಲದಲ್ಲಿ ಮಾಡಲು ಸಾಧ್ಯವಿಲ್ಲದಾಗ ಪ್ರಾಯಶ್ಚಿತ್ತಸಹಿತವಾಗಿ ಅನ್ಯಕಾಲದಲ್ಲಿ ಮಾಡಬಹುದು ಎಂದಾಗ, ನಿತ್ಯಕರ್ಮವಾದ ಉಪಾಕರ್ಮವನ್ನೂ ಪ್ರಧಾನಕಾಲದಲ್ಲಿ ದೋಷವಿದ್ದಾಗ ದೋಷರಹಿತವಾದ ಅನ್ಯಕಾಲದಲ್ಲಿ ಮಾಡಬೇಕು ಎನ್ನುವದು ಸಹಜವಾಗಿ ಸಿದ್ಧವಾಗುತ್ತದೆ.

## ಮಾಧ್ವರಿಗಾಗಿ ಒಂದು ಯುಕ್ತಿ

ಮತ್ತೂ ಒಂದು ಯುಕ್ತಿಯನ್ನು ಉದಾಹರಣೆಯ ಮುಖಾಂತರ ನೀಡುತ್ತೇನೆ.

ಏಕಾದಶಿಯ ಉಪವಾಸ ಇದು ನಿತ್ಯಕರ್ಮ. ಅಂದರೆ ಏಕಾದಶಿಯ ಉಪವಾಸವನ್ನು ಬಿಡಲೇಬಾರದು ಮಾಡಲೇಬೇಕು.

ಏಕಾದಶಿಯ ಉಪವಾಸಕ್ಕೆ ವಿಹಿತವಾದ ಕಾಲ ಯಾವುದು. ಯಾವ ಸೂರ್ಯೋದಯದಲ್ಲಿ ಏಕಾದಶೀ ತಿಥಿಯಿದೆಯೋ ಆ ದಿವಸ. ಆದರೆ, ಆ ಏಕಾದಶಿ ದಶಮಿಯ ಸಂಪರ್ಕವನ್ನು ಪಡೆದಲ್ಲಿ (ಅರುಣೋದಯಕ್ಕಿಂತ 32 ನಿಮಿಷಗಳ ಮುಂಚೆ ದಶಮಿಯಿದ್ದಲ್ಲಿ) ಆ ದಿವಸ ಏಕಾದಶಿಯನ್ನು ಮಾಡದೇ ಊಟವನ್ನು ಮಾಡಿ, ಮಾರನೆಯ ದಿವಸ ದ್ವಾದಶಿಯಂದು ಉಪವಾಸ ಮಾಡಬೇಕು ಎನ್ನುವದು ಧರ್ಮಶಾಸ್ತ್ರಗಳ ನಿರ್ಣಯ. ಮಾಧ್ವರಲ್ಲಂತೂ ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ, ಕಾರಣ, ಸ್ವಯಂ ಶ್ರೀಮದಾಚಾರ್ಯರೇ ಈ ತತ್ವವನ್ನು ಪ್ರತಿಪಾದಿಸಿದ್ದಾರೆ.

ಇದರಿಂದಲೂ ಸಿದ್ಧವಾಗುವ ವಿಷಯ, ನಿತ್ಯಕರ್ಮದ ಆಚರಣೆಯನ್ನು ಮಾಡುವ ಕಾಲದಲ್ಲಿ ದೋಷವಿದ್ದರೆ ಆ ಕಾಲವನ್ನು ಪರಿತ್ಯಾಗ ಮಾಡಿ ಪರಿಶುದ್ಧವಾದ ಮತ್ತೊಂದು ಕಾಲದಲ್ಲಿ ಮಾಡಬೇಕು ಎನ್ನುವದು.

## ಮಾಧ್ವೇತರರಿಗಾಗಿ ಒಂದು ಯುಕ್ತಿ

ಮಾಧ್ವೇತರರಲ್ಲಿಯೂ ವಿಜಯದಶಮೀ, ಶಿವರಾತ್ರಿ ಮುಂತಾದವುಗಳಲ್ಲಿ ಈ ರೀತಿಯಾಗಿ ಮುಖ್ಯಕಾಲದಲ್ಲಿ ದೋಷವಿದ್ದಾಗ ಅದನ್ನು ಪರಿತ್ಯಾಗ ಮಾಡಿ ಮಾರನೆಯ ದಿವಸ ಮಾಡುವ ಪದ್ಧತಿಯಿದ್ದೆ ಇದೆ.

ಇದಕ್ಕಿಂತ ಸುಲಭವಾಗಿ ಅರ್ಥವಾಗುವ ಮತ್ತೊಂದು ದೃಷ್ಟಾಂತವೆಂದರೆ, ಶ್ರಾದ್ಧ.

ಶ್ರಾದ್ಧದ ದಿವಸ ಹೆಂಡತಿ ರಜಸ್ವಲೆಯಾಗಿದ್ದಲ್ಲಿ, ಅಥವಾ ಕರ್ತೃವಿಗೆ ಸೂತಕ ಮೃತಕಗಳು ಬಂದಿದ್ದಲ್ಲಿ ಅದನ್ನು ಕಳೆದುಕೊಂಡು ಶ್ರಾದ್ಧ ಮಾಡಬೇಕು ಎಂದು ಶಾಸ್ತ್ರದಲ್ಲಿಯೇ ವಿಧಾನವಿದೆ. ಅಂದರೆ ಶ್ರಾದ್ಧ ನಿತ್ಯವಿಧಿಯಾದರೂ ಸಂದರ್ಭವಿಶೇಷದಲ್ಲಿ ಅದಕ್ಕೆ ಕಾಲಾಂತರವನ್ನು ಹೇಳಿಯೇ ಇದ್ದಾರೆ. ಇದನ್ನು ಅದ್ವೈತಿಗಳೂ ಪಾಲಿಸುತ್ತಾರೆ, ವಿಶಿಷ್ಟಾದ್ವೈತಿಗಳೂ ಪಾಲಿಸುತ್ತಾರೆ.

ಹೀಗಾಗಿ ಗ್ರಹಣ ಅಥವಾ ಸಂಕ್ರಾಂತಿಯ ದೋಷವಿರುವ ದಿವಸ ನಿತ್ಯೋಪಾಕರ್ಮವನ್ನಾಗಲೀ ನೂತನೋಪಾಕರ್ಮವನ್ನಾಗಲೀ ಮಾಡಲು ಬರುವದಿಲ್ಲ.

ಹೇಮಲಂಬ ಸಂವತ್ಸರದ ಶ್ರಾವಣ ಶುದ್ಧ ಪೌರ್ಣಿಮೆಯಂದು ಚಂದ್ರಗ್ರಹಣ ಇರುವ ಕಾರಣ, ಋಗ್ವೇದಿಗಳಾಗಲೀ ಯಜುರ್ವೇದಿಗಳಾಗಲೀ ಸರ್ವಥಾ ನಿತ್ಯೋಪಾಕರ್ಮವನ್ನೂ ಮಾಡಬಾರದು. ನೂತನೋಪಾಕರ್ಮವನ್ನೂ ಮಾಡಬಾರದು.

## ಎಲ್ಲದರ ಸಂಗ್ರಹ

1. ಉಪಾಕರ್ಮವನ್ನು ವಿಧಾನ ಮಾಡಬೇಕಾದರೇ ಐದು ಕಾಲಗಳನ್ನು ವಿಧಾನ ಮಾಡಿರುವದರಿಂದ ದೋಷವಿರುವ ಕಾಲದಲ್ಲಿ ಉಪಾಕರ್ಮ ಮಾಡದೇ ದೋಷವಿಲ್ಲದ ಕಾಲದಲ್ಲಿ ಉಪಾಕರ್ಮ ಮಾಡಬೇಕು ಎನ್ನುವದು ಸಿದ್ಧವಾಗುತ್ತದೆ.

2. ನಿತ್ಯಕರ್ಮವನ್ನು ಮಾಡಲು ಒಂದೇ ಕಾಲವಿದ್ದು, ಆ ಕಾಲದಲ್ಲಿ ಮಾಡಲು ಸಾಧ್ಯವಿಲ್ಲದಾಗ ಪ್ರಾಯಶ್ಚಿತ್ತಸಹಿತವಾಗಿ ಮತ್ತೊಂದು ಕಾಲದಲ್ಲಿ ಮಾಡಬೇಕು ಎನ್ನುವದು ನಿತ್ಯಕರ್ಮವಾದ ಸಂಧ್ಯಾವಂದನೆಯ ದೃಷ್ಟಾಂತದಲ್ಲಿ ಕಂಡೇ ಇದ್ದೇವೆ. ಸೂರ್ಯೋದಯಕ್ಕಿಂತ ಮುಂಚೆ ಸಂಧ್ಯಾವಂದನೆ ಮಾಡದೇ ಇದ್ದಲ್ಲಿ ಪ್ರಾಯಶ್ಚಿತ್ತಾರ್ಘ್ಯದ ಜೊತೆಯಲ್ಲಿ ಆ ನಂತರ ಸಂಧ್ಯಾವಂದನೆ ಮಾಡುತ್ತೇವೆ.

3. ಏಕಾದಶಿಯೂ ನಿತ್ಯಕರ್ಮ. ಆದರೆ ಏಕಾದಶಿ ತಿಥಿಗೆ ದಶಮೀಸಂಪರ್ಕ ಎಂಬ ದೋಷವಿದ್ದಾಗ ಏಕಾದಶಿಯಂದು ಉಪವಾಸ ಮಾಡದೇ ದ್ವಾದಶೀತಿಥಿಯಂದು ಉಪವಾಸ ಮಾಡುತ್ತೇವೆ. ಏಕಾದಶಿಯಲ್ಲಿ ದೋಷವಿದ್ದಾಗ ದ್ವಾದಶಿಯೇ ಉಪವಾಸದ ಕಾಲ ಎಂದು ವಿಹಿತವಾಗಿದೆ.

4. ಕರ್ಮಕ್ಕೆ ಒಂದೇ ಕಾಲವಿದ್ದು ಅನಿವಾರ್ಯವಾಗಿ ಬೇರೆ ಸಂದರ್ಭದಲ್ಲಿ ಮಾಡಬೇಕಾಗಿ ಬಂದಾಗ ಪ್ರಾಯಶ್ಚಿತ್ತ ಮಾಡಬೇಕು. ಆದರೆ ಏಕಾದಶಿ, ಉಪಾಕರ್ಮಗಳಲ್ಲಿ ಅನೇಕ ಕಾಲಗಳಿರುವದರಿಂದ ಪ್ರಾಯಶ್ಚಿತ್ತದ ಆವಶ್ಯಕತೆಯಿಲ್ಲ.

5. ಹೇಮಲಂಬ ಸಂವತ್ಸರದ ಶ್ರಾವಣ ಪೂರ್ಣಿಮೆಯಂದು ಚಂದ್ರಗ್ರಹಣವಿರು-ವದರಿಂದ ಗ್ರಹಣವಿರುವ ದಿವಸ ಉಪಾಕರ್ಮ ಮಾಡಿದರೆ ಉಪದೇಶ ಮಾಡುವ ಗುರುವಿಗೆ ಮರಣವುಂಟಾಗುತ್ತದೆ — **ಗ್ರಹಯೋಗೋ**

**ಗುರುಂ ಹಂತಿ —** ಎಂದಿರುವದರಿಂದ ಶ್ರಾವಣ ಶುದ್ಧ ಪೌರ್ಣಿಮೆಯಿಂದು ಋಗ್ವೇದಿಗಳಾಗಲೀ, ಯಜುರ್ವೇದಿಗಳಾಗಲೀ ನಿತ್ಯ, ನೂತನ ಎರಡೂ ಉಪಾಕರ್ಮಗಳನ್ನು ಮಾಡಬಾರದು.

## ನಿರ್ಣಯ

### ಋಗ್ವೇದಿ ನಿತ್ಯ ನೂತನ ಉಪಾಕರ್ಮ

ಪ್ರಧಾನ ಪಕ್ಷವಾದ ಶ್ರವಣಾ ನಕ್ಷತ್ರ ಇರುವ ದಿವಸ ಗ್ರಹಣ ಇರುವದರಿಂದ ಶ್ರಾವಣಮಾಸದ ಶುಕ್ಲಪಕ್ಷದ ಪಂಚಮೀ (ಜುಲೈ 28, 2017) ಯಂದು ಮಾಡಬೇಕು.

ಜನನ, ಮರಣಾದಿಗಳ ಸೂತಕದಿಂದ ಶ್ರಾವಣ ಶುದ್ಧ ಪಂಚಮಿಯಂದು ಮಾಡಲು ಸಾಧ್ಯವಿಲ್ಲದವರು ಭಾದ್ರಪದ-ಶುದ್ಧಪಂಚಮಿ, ಋಷಿಪಂಚಮಿಯಂದು (ಆಗಸ್ಟ್ 26, 2017) ನಿತ್ಯ ಮತ್ತು ನೂತನ ಉಪಾಕರ್ಮವನ್ನು ಆಚರಿಸಬಹುದು.

ಇದು ಋಗ್ವೇದಿಗಳಿಗೆ.

## ಕೃಷ್ಣಯಜುರ್ವೇದಿ ನಿತ್ಯ ನೂತನ ಉಪಾಕರ್ಮ

ಪ್ರಧಾನ ಪಕ್ಷವಾದ ಹುಣ್ಣಿಮೆ ಇರುವ ದಿವಸ ಗ್ರಹಣ ಇರುವದರಿಂದ, ಭಾದ್ರಪದ ಮಾಸದ ಹುಣ್ಣಿಮೆಯಂದು (ಸೆಪ್ಟೆಂಬರ 6, 2017) ಮಾಡಬೇಕು.

ಸಂಕ್ರಾಂತಿರ್ಗ್ರಹಣಂ ವಾಪಿ
ಯದಿ ಪರ್ವಣಿ ಜಾಯತೇ
ಪರ್ವಣ್ಯೇವೋತ್ತರೇ ಮಾಸಿ
ಸ್ಯಾದುಪಾಕರಣಂ ಹಿ ತತ್

**ಯಜುರ್ವೇದಿಗಳು ಉಪಾಕರ್ಮವನ್ನು ಮಾಡಬೇಕಾದರೆ ಆ ಹುಣ್ಣಿಮೆಗೆ ಸಂಗವಕಾಲದ ಸ್ಪರ್ಶವಾದರೂ ಇರಬೇಕು ಎನ್ನುವದು ನಿಯಮ. ಈ ಬಾರಿ ಭಾದ್ರಪದ ಹುಣ್ಣಿಮೆ ಮಧ್ಯಾಹ್ನ 11:30 ರವರೆಗೆ ಇದೆಯಾದ್ದರಿಂದ ಅವಶ್ಯವಾಗಿ ಆ ದಿವಸವೇ ಯಜುರ್ವೇದಿಗಳು ನಿತ್ಯ ಮತ್ತು ನೂತನ ಉಪಾಕರ್ಮವನ್ನು ಆಚರಿಸಬೇಕು.**

ಭಾದ್ರಪದ ಕೃಷ್ಣ ಪ್ರತಿಪದಾ ತಿಥಿಯ ಶ್ರಾದ್ಧವು ಈ ಬಾರಿ ಹುಣ್ಣಿಮೆಯಂದೇ ಇದ್ದರೂ ಯಾವ ಸಮಸ್ಯೆ ಇಲ್ಲ. ಉಪಾಕರ್ಮಕ್ಕೆ ಅದು ದೋಷಕರವಲ್ಲ. ಯಜುರ್ವೇದಿಗಳಿ ಕೇವಲ ಗ್ರಹಣ ಸಂಕ್ರಾಂತಿಗಳು[4] ಉಪಾಕರ್ಮದೋಷವಾದ್ದರಿಂದ ಅವಶ್ಯವಾಗಿ ಆ ದಿವಸ ಉಪಾಕರ್ಮವನ್ನು ಮಾಡಬೇಕು[5].

ಜನನ ಮರಣಾದಿ ಸೂತಕಗಳ ಸ್ಪಷ್ಟವಾದ ಆಶಂಕೆ ಭಾದ್ರಪದ ಹುಣ್ಣಿಮೆಯ ಸಂದರ್ಭಕ್ಕಿದ್ದಲ್ಲಿ ಆಷಾಢಹುಣ್ಣಿಮೆಯಂದು (ಜುಲೈ 9, 2017)

---

[5] ಇನ್ನು ಮಹಾಲಯದಲ್ಲಿ ಹದಿನೈದೂ ದಿವಸ ಪಕ್ಷಶ್ರಾದ್ಧ ಮಾಡುವವರು ಉಪಾಕರ್ಮವನ್ನು ಬೆಳಿಗ್ಗೆ ಮುಗಿಸಿ ನಂತರದಲ್ಲಿ ಶ್ರಾದ್ಧವನ್ನು ಮಾಡಬಹುದು. ಅಥವಾ ಆಷಾಢ ಹುಣ್ಣಿಮೆಯಂದು ಉಪಾಕರ್ಮವನ್ನು ಮಾಡಿಕೊಂಡು   ಭಾದ್ರಪದ ಹುಣ್ಣಿಮೆಯಂದು ಪ್ರತಿಪದಾಶ್ರಾದ್ಧವನ್ನು ಆರಂಭಿಸಬಹುದು.

ಒಂದೇ ದಿವಸ ಪಕ್ಷ ಮಾಡುವವರು ಭಾದ್ರಪದ ಹುಣ್ಣಿಮೆಯಂದು ಉಪಾಕರ್ಮ ಮಾಡಿಕೊಂಡು ಮುಂದಿನ ದಿವಸಗಳಲ್ಲಿ ಮಾಡುವದು ಉತ್ತಮ.

ಒಂದೇ ಬಾರಿ ಮಹಾಲಯದಲ್ಲಿ ಪಕ್ಷ ಮಾಡುವರು ಯಾವಾಗ ಮಾಡಬೇಕು, ಯಾವಾಗ ಮಾಡಬಾರದು ಎನ್ನುವದನ್ನು VNA136 ನೇ ಲೇಖನದಲ್ಲಿ ತಿಳಿಸಿದ್ದೇನೆ.

ಯಜುರ್ವೇದಿಗಳು ಉಪಾಕರ್ಮವನ್ನು ಆಚರಿಸಿಬಿಡಬೇಕು.

## ಶುಕ್ಲಯಜುರ್ವೇದಿ ನಿತ್ಯ ನೂತನ ಉಪಾಕರ್ಮ

ಪ್ರಧಾನ ಪಕ್ಷವಾದ ಹುಣ್ಣಿಮೆ ಇರುವ ದಿವಸ ಗ್ರಹಣ ಇರುವದರಿಂದ ಶ್ರಾವಣಮಾಸದ ಶುಕ್ಲಪಕ್ಷದ ಪಂಚಮೀ (ಜುಲೈ 28, 2017) ಯಂದು ಮಾಡಬೇಕು.

ಶುಕ್ಲಯಜುರ್ವೇದಿಗಳಿಗೂ ಶ್ರಾವಣ ಪೌರ್ಣಿಮೆಯೇ ಪ್ರಧಾನ. ಆದರೆ ಅವರಿಗೆ ಪಂಚಮಿ ಎರಡನೆಯ ಪಕ್ಷ. ಋಗ್ವೇದಿಗಳಂತೆ ಹಸ್ತಾನಕ್ಷತ್ರದ ಆವಶ್ಯಕತೆಯಿಲ್ಲ, ಆದರೆ, ಪಂಚಮಿಯಂದು ಅವರು ಉಪಾಕರ್ಮವನ್ನು ಮಾಡಬೇಕು.

**ಸಂಕ್ರಾಂತಿರ್ಗ್ರಹಣಂ ವಾಪಿ**
**ಪೌರ್ಣಮಸ್ಯಾಂ ಯದಾ ಭವೇತ್**
**ಉಪಾಕೃತಿಸ್ತು ಪಂಚಮ್ಯಾಂ**
**ಕಾರ್ಯಾ ವಾಜಸನೇಯಿಭಿಃ**

ವಾಜಸನೇಯಿಗಳು ಎಂದರೆ ಶುಕ್ಲಯಜುರ್ವೇದಿಗಳು. ಈ ಶಾಖೆಯವರು ಪೌರ್ಣಿಮೆಯಂದು ದೋಷವಿದ್ದಾಗ ಆ ಮಾಸದ ಪಂಚಮಿಯಂದು ಉಪಾಕರ್ಮವನ್ನು ಮಾಡಬೇಕು.

ಜನನ, ಮರಣಾದಿಗಳ ಸೂತಕದಿಂದ ಪಂಚಮಿಯಂದು ಮಾಡಲು ಸಾಧ್ಯವಿಲ್ಲದವರು ಭಾದ್ರಪದ ಮಾಸದ ಹುಣ್ಣಿಮೆಯಂದು (ಸೆಪ್ಟೆಂಬರ 6, 2017)  ಮಾಡಬೇಕು.

ಅದೂ ಸಾಧ್ಯವಿಲ್ಲದಿದ್ದಲ್ಲಿ ಆಷಾಢಹುಣ್ಣಿಮೆಯಂದು (ಜುಲೈ 9, 2017) ಯಜುರ್ವೇದಿಗಳು ಉಪಾಕರ್ಮವನ್ನು ಆಚರಿಸಿಬಿಡಬೇಕು.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491